**ದಿಃ15.11.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಜೆ.ವಿ.ಕೆ ವಕೀಲರಿಂದ ಃ**

1. ಓಪಿ.ಡಿ ಚೀಟಿ ನಿಪಿ.129
2. ಪರೀಕ್ಷಾ ವರದಿ ನಿಪಿ.130
3. ಔಷಧಿ ಸಲಹಾ ಚೀಟಿ ನಿಪಿ.131
4. ಎರಡು ಔಷಧಿ ಬಿಲ್ಲುಗಳು ನಿಪಿ.132 ಮತ್ತು 133 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ.ಕೆ.ಡಿ.ಡಿ ವಕೀಲರಿಂದ ಃ**

ಅಪಘಾತ ಕಾಲಕ್ಕೆ ಅರ್ಜಿದಾರ 2ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಆತ ಸಿದ್ದಾಪುರ ಸೈಂಟ್ ಆ್ಯನ್ಸ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ. ನಮ್ಮ ಮನೆಯಿಂದ ನನ್ನ ಮಗ ವ್ಯಾಸಂಗ ಮಾಡುತ್ತಿದ್ದ ಶಾಲೆ ಸುಮಾರು 9 ಕಿ.ಮಿ ದೂರದಲ್ಲಿ ಇದೆ. ಪ್ರತಿದಿನ ಶಾಲೆಗೆ ನನ್ನ ಮಗ ಖಾಸಗಿ ಬಸ್ ನಲ್ಲಿ ಹೋಗುತ್ತಿದ್ದ. ನಾನು ಈ ಅಪಘಾತವನ್ನು ಖುದ್ದು ನೋಡಿಲ್ಲ. ನಾನು ಅಪಘಾತವನ್ನು ಖುದ್ದು ನೋಡದೆ ಇರುವುದರಿಂದ ಅಪಘಾತ ಹೇಗೆ ಸಂಭವಿಸಿದೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ನೋಡಿದವರು ಹೇಳಿದ್ದಾರೆ ಎನ್ನುತ್ತಾರೆ. ಅಪಘಾತ ನಮ್ಮ ಮನೆಯ ಹತ್ತಿರ ಆಗಿದೆ. ನಮ್ಮ ಮನೆಯಿಂದ ಅಪಘಾತ ಸ್ಥಳ 500 ಮಿ ದೂರದಲ್ಲಿ ಇದೆ. ಅಪಘಾತ ಸಿದ್ದಾಪುರದಿಂದ ಕುಶಾಲನಗರ ಕಡೆ ಬರುವ ರಸ್ತೆಯಲ್ಲಿ ಸಂಭವಿಸಿದೆ.

ಅಪಘಾತ ರಸ್ತೆಯ ಯಾವ ಭಾಗದಲ್ಲಿ ಸಂಭವಿಸಿದೆ ಎಂದರೆ ಸಾಕ್ಷಿ ಈಗ ನೆನಪಿಲ್ಲ ಎನ್ನುತ್ತಾರೆ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ನಕಾಶೆ ಪ್ರಕಾರ ಅಪಘಾತ ರಸ್ತೆಯ ಮಧ್ಯ ಭಾಗದಲ್ಲಿ ಸಂಭವಿಸಿದೆ ಎಂದರೆ ಸರಿ. ಸಿದ್ದಾಪುರದಿಂದ ಕುಶಾಲನಗರ ಕಡೆ ಹೋಗುವ ರಸ್ತೆಯ ಎಡಭಾಗದಲ್ಲಿ ನನ್ನ ಮನೆ ಇದೆ. ಅಪಘಾತ ಕಾಲಕ್ಕೆ ನನ್ನ ಮಗನ ಜೊತೆ ಆತನ ಮೂರು ಸಹಪಾಠಿಗಳು ಇದ್ದರು. ಅಪಘಾತ ಸ್ಥಳದಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಅಪಘಾತ ನನ್ನ ಮಗಳ ತಪ್ಪಿನಿಂದಾಗಿ ಸಂಭವಿಸಿದೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ 1ನೇ ಎದುರುದಾರನ ಯಾವುದೇ ನಿರ್ಲಕ್ಷತೆ ಕಾರಣ ಅಲ್ಲ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ 1ನೇ ಎದುರುದಾರ ಬೈಕನ್ನು ಕುಶಾಲನಗರ ಕಡೆಯಿಂದ ಸಿದ್ದಾಪುರ ಕಡೆ ಚಾಲನೆ ಮಾಡಿಕೊಂಡು ಬರುತ್ತಿದ್ದ. ಅಪಘಾತದಲ್ಲಿ ನನ್ನ ಮಗನಿಗೆ ಗಾಯ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಸಿದ್ದಾಪುರ, ಮಡಿಕೇರಿ ಜಿಲ್ಲಾ ಆಸ್ಪತ್ರೆ, ಮಂಗಳೂರಿನ ಎನಪೊಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಆತನ ಕಿವಿಗೆ ಶಸ್ತ್ರ ಚಿಕಿತ್ಸೆ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಹಾಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ನನ್ನ ಮಗನ ಚಿಕಿತ್ಸೆಗಾಗಿ 2,50,000/-

ರೂ ಖರ್ಚು ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಅಪಘಾತದಲ್ಲಿ ಆದ ಗಾಯದಿಂದ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗ ಅಪಘಾತ ಪೂರ್ವದಲ್ಲಿ ಇರುವಂತೆ ಆರೋಗ್ಯವಾಗಿ ಇದ್ದಾನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ನಾನು ನ್ಯಾಯಲಯದವ ಮುಂದೆ ಹಾಜರು ಮಾಡಿರುವ ಔಷಧಿ ಬಿಲ್ಲುಗಳನ್ನು ಸುಳ್ಳಾಗಿ ಸೃಷ್ಟಿ ಮಾಡಿ ತಂದು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಈ ಅರ್ಜಿಗಾಗಿ ಸುಳ್ಳಾಗಿ ಸೃಷ್ಟಿ ಮಾಡಿ ತಂದು ಹಾಜರು ಮಾಡಿದ್ದೇನೆ ಎಂರದೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.